

ಹಾಗೆ ಬಡಿದ. ಆತ ಇವನನ್ನು ದಬ್ಬಿ ಹೇಗೋ ಪಾರಾಗಿ ಓಡಿಹೋದ. ಮುಂದೆ ಗಂಡನಿಗೆ ಪಾರ್ಶಿ ಬಂದು ಒಂದು ಕೈ, ಒಂದು ಕಾಲು, ತಲೆಯ ಭಾಗ ಸ್ವಾಧೀನ ಕಳೆದುಕೊಂಡಿತು. ಆಗ ಗೆಳೆಯ ಮನೆಗೆ ಬಂದು ಎಗ್ಗಿಲ್ಲದೆ ಎಲ್ಲವೂ ತೀರಿಸಿಕೊಂಡು ಹೋಗುತ್ತಿದ್ದ.

ಪ್ಯಾರಲೈಸ್ ಆದ ಗಂಡ ಎಂದು ಸಾಯುತ್ತಾನೆ ಎಂದು ನಿರೀಕ್ಷಿಸಹತ್ತಿದಳು. ಆ ಗೆಳೆಯನ ಜೊತೆ ಆರಾಮವಿರಬಹುದಲ್ಲ ಎಂಬ ಕನಸು. ಒಂದು ದಿನ ಗೆಳೆಯ ಒಂದು ಆಸೆ ವ್ಯಕ್ತಪಡಿಸಿದ. ಆತ ನನ್ನನ್ನು ಮುಖ ಹೆಬ್ಬುವ ಹಾಗೆ ಬಡಿದಿದ್ದಾನೆ. ಮೂಗು ಇವನ ದೆಸೆಯಿಂದಲೇ ಮೊಂಡಾಗಿದೆ. ಅದಕ್ಕಾಗಿ ಅವನ ಎದುರಿಗೆ ಕೇಳಿಗಾಗಿ ಅಣಿಗೊಳಿಸಿದ. ಅವಳ ಪ್ರತಿರೋಧದ ನಡುವೆ ಆರಂಭವಾದ ಕೇಳಿಯನ್ನು ನೋಡಿ ಗಂಡ, ಕರುವನ್ನು ಕಳೆದುಕೊಂಡ ಆಕಳಿನಂತೆ ಬೋರಿಡತೊಡಗಿದ. ಒಂದು ದಿನ ಎರಡು ದಿನ ಮೂರು ದಿನ ಚೀರುತ್ತಲೆ ನಾಲ್ಕನೇ ದಿನಕ್ಕೆ ಸತ್ತೇ ಹೋದ. ಆಕೆ ಕೊಂಚ ನಿರಾಳವಾಗಿ ಇವನ ಜೊತೆ ಸಂಸಾರ ಹೂಡಿದಳು. ಇವನೋ ದುಡ್ಡಿಗಾಗಿ ಪೀಡಿಸತೊಡಗಿದ. ಸಿಗರೇಟಿನಿಂದ ಸುಡಹತ್ತಿದ. ಇವನಿಂದಲೂ ದೂರವಾಗಿ ನೆಲೆಸಹತ್ತಿದಾಗಲೇ ಇವನು ಕುಡಿದು ಕುಡಿದು ಲಿವರ್ ಕ್ಯಾನ್ಸರ್ ನಿಂದ ಸತ್ತು ಹೋದ. ಆಕೆ ಹಿಮಾಲಯಕ್ಕೆ ಹೋದಳು. ಯೋಗ ಕಲಿತಳು. ಎಲ್ಲೆಲ್ಲಿಯೋ ಮುಖಾಮುಖಿಯಾಗಿ ಮತ್ತೆ ಮರಳಿ ಬಂದಳು.

ಇದನ್ನು ಓದಿದಾಗ ಡಿಪ್ರೆಶನ್ ಸಂಪೂರ್ಣವಾಗಿ ಇಳಿದಿತ್ತು.

ಇದು ಕುಚೋದ್ಯದ ಬರಹವೇ? ಅನ್ನಿಸಿತು.

ತನ್ನ ಪೂರ್ವಾಶ್ರಮ ತಿಳಿದೇ ಇದನ್ನು ಬರೆದಿರಬಹುದು ಅನ್ನಿಸಿತು. ಆದರೂ ಆ ಕವಿ ಚಕ್ರವರ್ತಿ ತನ್ನ ಬಿಡುಗಡೆಯ ದಾರಿಯಾಗಿ ಬಂದುದಕ್ಕೆ ಕೃತಜ್ಞತೆ ಸಲ್ಲಿಸಿ ಅವನಿಗೆ ಫೋನಾಯಿಸಿ ಅವನನ್ನು ಮನೆಗೆ ಆಹ್ವಾನಿಸಿದಳು. ಆತ ಯುದ್ಧದಲ್ಲಿ ಗೆದ್ದವನಂತೆ ಮನೆಯ ಒಳಗೆ ಪ್ರವೇಶಿಸಿದ. ಬಂದವನೆ ಎರಡು ಕಾಲನ್ನು ಟೇಬಲ್ಲಿನ ಮೇಲೆ ಇಟ್ಟು ಸೋಫಾದ ಮೇಲೆ ಕುಳಿತ. ಒಂದು ಅಮೂಲ್ಯವಾದ ಮೂಲವಸ್ತು ಕಂಡು ಹಿಡಿದ ವಿಜ್ಞಾನಿಯ ಆತ್ಮವಿಶ್ವಾಸದಂತೆ ಆತನ ಮುಖಚರ್ಯೆಯಿತ್ತು. ಮತ್ತು ಇವಳನ್ನು ಇಂದಿನಿಂದ ತನ್ನ ಅಡಿಯಲ್ಲಿ ಇಟ್ಟುಕೊಳ್ಳಬಹುದೆಂಬ ಮಹತ್ವಾಕಾಂಕ್ಷೆ ಅವನು ಕಾಲು ಅಲ್ಲಾಡಿಸುವ ಭಂಗಿಯಿಂದ ತಿಳಿದು ಬರುತ್ತಿತ್ತು. ಅವಳಿಗೆ ಅಸಾಧ್ಯ ಕೋಪ ಬಂದು ಇವನನ್ನು ಓಡಿಸಲು ಯೋಚಿಸಹತ್ತಿದಳು. ಅಷ್ಟರಲ್ಲಿ ಆತ ತನ್ನ ಅಂಗಿಯ ಗುಂಡಿಯನ್ನು ಬಿಚ್ಚಿ ಅಂಗಿಯನ್ನು ಕಳಚಿದ. ಪ್ಯಾಂಟು ಬಿಚ್ಚಲು ಬೆಲ್ಟಿಗೆ ಕೈಹಾಕಿದ. ಅವಳು ಜಾಗ್ರತಳಾದಳು. ಅವನ ಬಲಗೈಯವನ್ನು ಹಿಡಿದು ಎಳೆದು ಹೊರಹಾಕಿ ಬಾಗಿಲು ಮುಚ್ಚಿಕೊಂಡಳು. ಯಾಕೋ ಮನದಾಳದಲ್ಲಿ ತಳಮಳ ಉಂಟಾದಂತೆ ಆಯಿತು. ಇದು ಡಿಪ್ರೆಶನ್ನೋ ಅಲ್ಲೋ ತಿಳಿಯದಾಯಿತು. ಸುಮ್ಮನೆ ಕಿಟಕಿಯ ಮುಖಾಂತರ ಹೊರನೋಡಿದಳು. ಆ ಕವಿ ಮಹಾಶಯ ಬೆತ್ತಲನಾಗಿ ಪ್ಯಾಂಟು ಶರ್ಟನ್ನು ಹೆಗಲಿಗೆ ಹಾಕಿಕೊಂಡು ನಿಧಾನವಾಗಿ ನಡೆದು ಹೋಗುತ್ತಿದ್ದ.

●